ವಿಜಯ ಕರ್ನಾಟಕ

ಸೋಮವಾರ 29 ಅಕ್ಟೋಬರ್ 2001

# ಅರ್ಥ್: ಅರ್ಥವಂತಿಕೆಯ ಆರೋಗ್ಯ ಕೇಂದ್ರ

ಪುರಾತನ ಭಾರತೀಯ ವೈದ್ಯಪದ್ಧತಿ ಆಯುರ್ವೇದ. ಅಥರ್ವಣ ವೇದದಲ್ಲಿ ಆಯುರ್ವೇದ ಶಾಸ್ತ್ರದ ಉಲ್ಲೇಖವಿದೆ. ಆಯು ಮತ್ತು ವೇದ ಎರಡು ಸಂಸ್ಕೃತ ಪದಗಳ ಸಮ್ಮಿಲನವೇ ಇದು. ಆಯು ಎಂದರೆ ಜೀವ. ವೇದ ಎಂದರೆ ಶಾಸ್ತ್ರ ಆರೋಗ್ಯ ರಕ್ಷಣೆ.

ಆಯುರ್ವೇದ ಅವತರಣವನ್ನು ಗಮನಿಸಿದರೆ ಬ್ರಹ್ಮ, ದಕ್ಷ ಪ್ರಜಾಪತಿ, ಅಶ್ವಿನಿಕುಮಾರರು, ಇಂದ್ರ ದೈವ ಪರಂಪರೆ, ಭಾರದ್ವಾಜ ಮನುಷ್ಯ ಪರಂಪರೆ, ಆತ್ರೇಯ, ಆತ್ರೇಯ ಸಂಪ್ರದಾಯ, ಅಗ್ನಿವೇಶ, ಭೇಲಾ, ಹರೀಶ, ಜತುಕರ್ಣ, ಪರಾಶರ, ಕ್ಷಾರಪಾಣಿ, ಧನ್ವಂತರಿ, ಧನ್ವಂತರಿ ಸಂಪ್ರದಾಯ, ಸುಶ್ರುತ, ಔಪದೇನವ, ಕರವೀರ, ವೈತರಣ, ಔರಭ್ರ, ಪೌಷ್ಕಲಾವತ, ಗೋಪುರ, ರಕ್ಷಿತ ಈ ತಳಹದಿಯಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿ ಜನತೆಗೆ ಪೂರಕವಾಗಿದೆ.

ಅರ್ಥ್ ಅಂದರೆ ಆತ್ರೇಯ ರಿಸಾರ್ಟ್ಸ್ ಫಾರ್ ಟ್ರೆಡಿಷನಲ್ ಹೀಲಿಂಗ್. ಇದೀಗ ವಿಶಿಷ್ಟ ಆರೋಗ್ಯ ಕೇಂದ್ರವಾಗಿ ರೂಪುಗೊಂಡಿದೆ. ಡಾ. ಸಂಜಯ್ ಶರ್ಮ, ಡಾ. ಪ್ರಶಾಂತ್, ಡಾ. ವೇಣು ಗೋಪಾಲ್, ಡಾ. ರಜತ್, ಯುವ ವೈದ್ಯರುಗಳ ಸಾಹಸಗಾಥೆಯ ಫಲಶ್ರುತಿ ಅರ್ಥ್!

ಬೆಂಗಳೂರಿನ ಎಚ್.ಎ.ಎಲ್. ಎರಡನೇ ಹಂತದಲ್ಲಿ ರೂಪುಗೊಂಡಿರುವ ಸುಸಜ್ಜಿತ ಆಯುರ್ವೇದ ಆರೋಗ್ಯ ಕೇಂದ್ರವಿದು. ಮೂರು ತಿಂಗಳ ಸಾಂಪ್ರದಾಯಿಕ ಬಾಣಂತನ ಮಾಡಿ ತಾಯಿ ಮತ್ತು ಮಗುವನ್ನು ಎಲ್ಲ ವಿಧಗಳಲ್ಲೂ ಆರೋಗ್ಯಪೂರ್ಣರನ್ನಾಗಿ ಪೋಷಿಸಿ ಹಾರ್ದಿಕವಾಗಿ ಕಳುಹಿಸಿಕೊಡುವ ತವರು ಮನೆಯ ಪಾತ್ರ ವಹಿಸುತ್ತದೆ.

ವೇಳೆಗೆ ಸರಿಯಾಗಿ ಅಭ್ಯಂಜನ ಸ್ನಾನ, ಧೂಪ ಹಾಕಿ ತಲೆ ಕಾಯಿಸುವಿಕೆ, ಮೈಗೆ ಬಜೆ, ಅರಿಸಿನ ಲೇಪನ, ಊಟದಲ್ಲಿ ತುಪ್ಪ, ಮೆಣಸು, ಬೆಳ್ಳುಳ್ಳಿಯ ಬಳಕೆ, ಅಂಟಿನುಂಡೆ ಮುಂತಾದ ಸಂಪ್ರದಾಯಬದ್ಧ ಉಪಚಾರ, ಕಣ್ಣು ಉರಿ, ತಲೆನೋವು, ಬೆನ್ನುನೋವು ಇಂಥಹ ಸಾಧಾರಣ ಕಾಯಿಲೆಗಳಿಂದ ಆರಂಭವಾಗಿ ವಾಸಿಯಾಗದ ಕಾಯಿಲೆ ಎಂದು ತೀರ್ಮಾನಿತವಾಗಿರುವ ತೊಂದರೆಗಳಿಗೂ ಉಪಶಮನ ಇಲ್ಲಿದೆ.

ಸಲಹಾ ಕೋಣೆ, ಸಂದರ್ಶನ ಕೋಣೆ, ಪಂಚಕರ್ಮ ಕ್ರಿಯೆಗಳಿಗೆ ಬೇಕಾಗುವ ಹಬೆ, ಸ್ನಾನಗೃಹ, ಶಿರೋಧಾರ ನೀಡುವ ಕೊಠಡಿ, ಮುಖಕಾಂತಿಗೆ ಚಿಕಿತ್ಸೆ ನೀಡುವ ನವನವೀನ ಕಾಸ್ಮೆಟಾಲಜಿಯ ಕೋಣೆ, ಸೂರ್ಯಕಿರಣ ಶಾಖಕ್ಕೆ ಒಳಪಡಿಸುವ ಕೋಣೆ, ಧ್ಯಾನಮಂದಿರ, ಬಾಣಂತಿ - ಮಗುವಿಗೆ ಪ್ರತ್ಯೇಕ ಕೋಣೆಗಳು, ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಸ್ನಾನ ಮಾಡಿಸಲು ಮಾದರಿ ನೀಳ ಬಾತ್‌ಟಬ್, ನಾರು -ಬೇರುಗಳನ್ನು ಹಾಕಿ ಕುದಿಸುವ ಹಂಡೆಗಳು, ಹಳೆ ಮತ್ತು ಆಧುನಿಕ ಎಲ್ಲ ಸೌಲಭ್ಯಗಳೊಂದಿಗೆ ನುರಿತ ವೈದ್ಯರ ಸೇವಾ ಕೈಂಕರ್ಯ, ಜೊತೆಗೆ ಗ್ರಂಥಾಲಯ, ವಿಶ್ರಾಂತಿ ಕೋಣೆಗಳು, ಹೊರ ರೋಗಿಗಳಿಗೆ ತಂಗಲು ಸುಸಜ್ಜಿತ ಕೋಣೆಗಳು, ಟ್ರಾವೆಲ್ಸ್ ಪ್ಯಾಕೇಜ್, ವಿದೇಶಿ ರೋಗಿಗಳಿಗೆ ಜೆಟ್‌ಲ್ಯಾಗ್ ಜೊತೆಗೆ ಕಾಸ್ಮೆಟಾಲಜಿ, ರೆಜುವಿನೇಷನ್, ಸ್ವಸ್ಥ ಆರೋಗ್ಯ ರಕ್ಷಣೆ, ಇನ್ ಫರ್ಟಿನಿಟಿ ಸಮಸ್ಯೆ, ಪೈಲ್ಸ್ ಕಿಡ್ನಿಯಲ್ಲಿ ಕಲ್ಲು, ರೇಖಿ ಮುಂತಾದ ಸೇವಾ ಸೌಲಭ್ಯ ಹೊಂದಿರುವ ಆರೋಗ್ಯ ಕೇಂದ್ರವಿದು.



ಆಯುರ್ವೇದ ಚಿಕಿತ್ಸೆಯ ಒಂದು ವಿಧಾನ.

'ನವೀನ ಮಾದರಿಯ ಅರ್ಥ್ ಸಂಪೂರ್ಣ ಸೌಲಭ್ಯವಿರುವ ಆರೋಗ್ಯಕೇಂದ್ರದ ಪೈಕಿ 'ರಾಜ್ಯದಲ್ಲಿ ಎರಡನೆಯದು' ಎಂದು ಹೆಮ್ಮೆಯಿಂದ ವಿವರಿಸುವ ಡಾ. ಸಂಜಯ್‌ಶರ್ಮ ಆಯುರ್ವೇದ ಚಿಕಿತ್ಸಾ ಪದ್ಧತಿ ಮಂದಗತಿಯದು ಎಂಬ ಮಾತನ್ನು ಸಂಪೂರ್ಣವಾಗಿ ತಳ್ಳಿ ಹಾಕುತ್ತಾರೆ. ಅರ್ಥ್‌ನಲ್ಲಿ ಚಿಕಿತ್ಸೆ ಪಡೆಯುವವರಿಗೆ ಕಡಿಮೆ ಅವಧಿಯಲ್ಲಿ ಶೀಘ್ರ, ಆರೋಗ್ಯ ಲಭ್ಯ ಎನ್ನುತ್ತಾರೆ.